**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ **30-12-2024 ರಂದು** ಪ್ರಮಾಣ ವಚನ ಬೋಧಿಸಲಾಯಿತು

C.C.No. 6516/2022

DW-1

ಸಾಕ್ಷಿದಾರರ ಹೆಸರು - ಮಂಜುನಾಥ ಅಣ್ಣಪ್ಪಾ ಬಸಗೌಡನವರ

ವಯಸ್ಸು - 36 ವರ್ಷ

ಉದ್ಯೋಗ - ಒಕ್ಕಲುತನ

ಸಾಕೀನ - ಕರಗಾಂವ , ತಾಃ ಚಿಕ್ಕೋಡಿ

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದ:**

1) ನನಗೆ ಪಿರ್ಯಾದುದಾರರ ಪರಿಚಯ ಇರುತ್ತದೆ. ನನ್ನ ಅವಶ್ಯಕತೆಗಳಿಗಾಗಿ ಪಿರ್ಯಾದುದಾರರ ಕಡೆಯಿಂದ ದಿಃ 09-07-2021 ರಂದು ರೂ. 1,00,000/- ಹಣವನ್ನು ನಾನು ಕೈಗಡವಾಗಿ ಪಡೆದುಕೊಂಡಿದ್ದೆ. ಆ ಸಮಯದಲ್ಲಿ ಪಿರ್ಯಾದುದಾರರು ನನ್ನಿಂದ ಈ ಪ್ರಕರಣದ ಖಾಲಿ ಚೆಕ್ಕಿನ ಮೇಲೆ ಸಹಿ ಪಡೆದುಕೊಂಡು ನನಗೆ ಹಣ ನೀಡಿದ್ದರು. ನಾನು ಪಿರ್ಯಾದುದಾರರ ಕಡೆಯಿಂದ ಪಡೆದ ರೂ. 1,00,000/- ಹಣದಲ್ಲಿ

**1) ದಿಃ 26-03-2022 ರಂದು ರೂ. 6,200/- ಹಣವನ್ನು ನನ್ನ ಖಾತೆಯಿಂದ ವರ್ಗಾವಣೆ ಮಾಡಿರುತ್ತೇನೆ.**

**2) ದಿಃ 31-03-2022 ರಂದು ರೂ. 20,000/- ಹಾಗೂ ಅದೇ ದಿನ ಎರಡು ಬಾರಿ ತಲಾ ರೂ. 10,000/- ಗಳಂತೆ ಪಿರ್ಯಾದುದಾರರಿಗೆ ಹಣವನ್ನು ನನ್ನ ಖಾತೆಯಿಂದ**

**ವರ್ಗಾವಣೆ ಮಾಡಿರುತ್ತೇನೆ. ಸದರಿ ದಿನದಂದು ಒಟ್ಟು ನಾನು ರೂ. 40,000/- ಹಣವನ್ನು ವರ್ಗಾವಣೆ ಮಾಡಿರುತ್ತೇನೆ.**

**3) ದಿಃ 04-04-2022 ರಂದು ರೂ. 10,000/- ಹಣವನ್ನು ನನ್ನ ಖಾತೆಯಿಂದ ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ.**

**4) ದಿಃ 18-05-2022 ರಂದು ರೂ. 10,000/- ಹಣವನ್ನು ನನ್ನ ಖಾತೆಯಿಂದ ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ ಮತ್ತು ಅದೇ ದಿನ ಇನ್ನೂ ರೂ. 8,000/- ಹಣವನ್ನು ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ. ಹೀಗೆ ಸದರಿ ದಿನದಂದು ಒಟ್ಟು ರೂ. 18,000/- ಹಣವನ್ನು ನಾನು ನನ್ನ ಖಾತೆಯಿಂದ ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ.**

**5) ದಿಃ 21-05-2022 ರಂದು ನಾನು ನನ್ನ ಖಾತೆಯಿಂದ ರೂ. 10,000/- ಹಣವನ್ನು ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ.**

**6) ದಿಃ 22-05-2022 ರಂದು ನಾನು ನನ್ನ ಖಾತೆಯಿಂದ ರೂ. 10,000/- ಹಣವನ್ನು ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ.**

**7) ದಿಃ 17-06-2022 ರಂದು ನಾನು ನನ್ನ ಖಾತೆಯಿಂದ ರೂ. 10,000/- ಹಣವನ್ನು ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ.**

2) ಹೀಗೆ ನಾನು ನನ್ನ ಖಾತೆಯಿಂದ ಪಿರ್ಯಾದುದಾರರ ಖಾತೆಗೆ ಒಟ್ಟು ರೂ. 1,04,200/- ಹಣವನ್ನು ವರ್ಗಾವಣೆ ಮಾಡಿರುತ್ತೇನೆ. ಸದರಿ ಹಣವನ್ನು ನಾನು ಪಿರ್ಯಾದುದಾರರ ಕಡೆಯಿಂದ ಪಡೆದ ರೂ. 1,00,000/- ಹಣದ ಮರುಪಾವತಿಗಾಗಿ ಸಂದಾಯ ಮಾಡಿರುತ್ತೇನೆ.

3) ಪಿರ್ಯಾದುದಾರರು ನನ್ನಿಂದ ಇನ್ನೂ ತಮಗೆ ಬಡ್ಡಿ ಹಣ ಬರಬೇಕು ಎಂದು ಕೇಳಿದ್ದು ಹಿರಿಯರ ಸಮಕ್ಷಮದಲ್ಲಿ ಒಟ್ಟು ರೂ. 1,05,000/- ಗಳಿಗೆ ಮಾತುಕತೆಯಾಗಿದ್ದು ಹೀಗಾಗಿ ನಾನು ಪಿರ್ಯಾದುದಾರರಿಗೆ ರೂ. 1,04,200/- ಹಣವನ್ನು ನನ್ನ ಖಾತೆಯಿಂದ ವರ್ಗಾವಣೆ ಮಾಡಿದ್ದಕ್ಕಾಗಿ ಹಿರಿಯರ ಮಾತಿನಂತೆ ಪಿರ್ಯಾದುದಾರರಿಗೆ ರೂ. 800/- ಹಣವನ್ನು ನಗದಾಗಿ ನೀಡಿರುತ್ತೇನೆ.

ನಾನು ಪಿರ್ಯಾದುದಾರರಿಗೆ ನೀಡಬೇಕಾದ ಅಸಲು ಮತ್ತು ಬಡ್ಡಿ ಹಣವನ್ನು ನೀಡಿ ಆದ ನಂತರ ನಾನು ಪಿರ್ಯಾದುದಾರರಿಗೆ ಭದ್ರತೆಗಾಗಿ ನೀಡಿದ ಖಾಲಿ ಚೆಕ್ಕನ್ನು ಮರಳಿ ನೀಡಲು ಕೋರಿಕೊಂಡಿದ್ದು, ಪಿರ್ಯಾದುದಾರರು ತನ್ನ ಮನೆಯಲ್ಲಿ ನನ್ನ ಚೆಕ್ಕು ಇಟ್ಟಿರುವುದಾಗಿ ತಿಳಿಸಿ ನಂತರ ನನ್ನ ಚೆಕ್ಕನ್ನು ಮರಳಿ ಕೊಡುತ್ತೇನೆ ಎಂದು ತಿಳಿಸಿದ್ದು , ನಾನು ಪಿರ್ಯಾದುದಾರರ ಮಾತನ್ನು ಕೇಳಿ ನನ್ನ ಚೆಕ್ಕು ಮರಳಿ ಕೊಡಲು ಕೋರಿಕೊಂಡಾಗ ನನ್ನ ಚೆಕ್ಕನ್ನು ಕೊಟ್ಟಿರುವುದಿಲ್ಲ. ನಾನು ಪಿರ್ಯಾದುದಾರರ ಕಡೆಯಿಂದ ಪಡೆದ ಹಣವನ್ನು ಸಂಪೂರ್ಣ ಮುಟ್ಟಿಸಿರುತ್ತೇನೆ. ಹೀಗಾಗಿ ಪಿರ್ಯಾದುದಾರರು ಸಲ್ಲಿಸಿರುವ ಈ ದೂರನ್ನು ವಜಾಗೊಳಿಸಲು ವಿನಂತಿ. ನನ್ನ ಕರ್ನಾಟಕ ಬ್ಯಾಂಕ್ ಶಾಖೆ ಚಿಕ್ಕೋಡಿ ಇಲ್ಲಿಗೆ ಸೇರಿದ ನನ್ನ ಅಕೌಂಟ ಸ್ಟೇಟಮೆಂಟ್ ಇದರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.